**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂ: **18/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂ: **06**
ಸಿ.ಡಬ್ಲ್ಯೂ ನಂ: **12**
ಸಾಕ್ಷಿಯನ್ನು ದಿನಾಂಕ: **07-01-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು : ಬಸವರಾಜ

ತಂದೆಯ ಹೆಸರು : ಶರಣಪ್ಪ

ವಯಸ್ಸು : 35 ವರ್ಷ

ಉದ್ಯೋಗ : ಒಕ್ಕಲುತನ

ವಾಸ ಸ್ಥಳ : ಗುಡ್ಡದ ದೇವಲಾಪುರ

ಸಾಕ್ಷಿಯ ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರವರಿಂದ

ಚಾಸಾ 1 ನನ್ನ ಅಕ್ಕ, ಚಾಸಾ 10 ಮತ್ತು 11 ನನ್ನ ತಂದೆ-ತಾಯಿ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು. 1ನೇ ಆರೋಪಿ ಚಾಸಾ 1 ರವರ ಗಂಡ. ಇತರೆ ಆರೋಪಿಗಳು ಅವರ ಅಕ್ಕ, ತಾಯಿ ಮತ್ತು ತಂದೆ. 1ನೇ ಆರೋಪಿ ಚಾಸಾ 1 ರವರ ಮದುವೆ 25 ವರ್ಷಗಳ ಹಿಂದೆ ಕುಷ್ಟಗಿಯಲ್ಲಿ ಆಗಿತ್ತು. ಮದುವೆಯಾದ ನಂತರ ಆಕೆ 7-8 ವರ್ಷಗಳು ಗಂಡನ ಮನೆ ಗುಡ್ಡದ ದೇವಲಾಪುರದಲ್ಲಿ ಅನ್ಯೋನ್ಯವಾಗಿ ಇದ್ದಳು. ಅವರಿಗೆ ಇಬ್ಬರು ಮಕ್ಕಳು.

2). ನಂತರ ಆರೋಪಿಗಳು ವರದಕ್ಷಿಣೆ ತಂದಿಲ್ಲ ಬಂಗಾರ ಮತ್ತು 50 ಸಾವಿರ ರೂ. ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಹೊಡಿ ಬಡಿ ಮಾಡಿ ಪೀಡಿಸುತ್ತಿದ್ದರು. ಚಾಸಾ 1 ರವರ ಸಹಿ ಪಡೆದುಕೊಂಡು 1ನೇ ಆರೋಪಿಗೆ ಇನ್ನೊಂದು ಮದುವೆ ಮಾಡುತ್ತೇವೆ ಎಂದು ಇತರೆ ಆರೋಪಿಗಳು ಪ್ರಚೋದನೆ ಕೊಡುತ್ತಿದ್ದರು. ಪಕ್ಕದ ಮನೆಯವರಾದ ಚಾಸಾ 4 ಮತ್ತು 5 ಬುದ್ಧಿವಾದ ಹೇಳಿ ಬಂದಿದ್ದರು.

**3).** ದಿಃ **8-8-2016** ರಂದು ಮಧ್ಯಾಹ್ನ **12** ಗಂಟೆಗೆ ಆರೋಪಿಗಳ ಮನೆಯ ಹಾಲ್ ನಲ್ಲಿ ಜಗಳ ನಡೆದಿತ್ತು. ಆಗ ಚಾಸಾ **1** ಅವರ ಮನೆಯಲ್ಲೇ ಇದ್ದಳು. ಚಾಸಾ **1** ರವರಿಗೆ ಅವರ ಮಾವ ಲೇ ಸೂಳೆ ಬಂಗಾರ ಮತ್ತು ಹಣ ತೆಗೆದುಕೊಂಡು ಬಾ ಇಲ್ಲದಿದ್ದರೆ ಇಲ್ಲೇ ಮುಗಿಸಿ **1**ನೇ ಆರೋಪಿಗೆ ಇನ್ನೊಂದು ಮದುವೆ ಮಾಡಿಸಿ ಬಿಡ್ತಿನಿ ಎಂದು ಬೈಯ್ದ. **3** ಮತ್ತು **4**ನೇ ಆರೋಪಿಗಳು ಜಡೆ ಹಿಡಿದು ಎಳೆದಾಡಿಕೊಂಡು ಹೊಡೆ ಬಡಿ ಮಾಡುತ್ತಿದ್ದರು. ರಾಮಚಂದ್ರಪ್ಪ ಕಾಲಿನಿಂದ ಒದೆಯುತ್ತಿದ್ದ. ಈರಪ್ಪ ಕೊಡ್ಲಿಯಿಂದ ನಿನ್ನನ್ನು ಮುಗಿಸಿಬಿಡುತ್ತೇನೆ ಎಂದು **2-3** ಬಾರಿ ಕೊಡ್ಲಿ ಬೀಸಿದಾಗ ಚಾಸಾ **1** ತಪ್ಪಿಸಿ ಕೊಂಡಿದ್ದು, ಬಾಗಿಲಿಗೆ ತಾಗಿ ಅದು ಚೂರಾಯಿತು. ನಂತರ ಪಕ್ಕದ ಮನೆಯವರಾದ ಬಂಗಾರಪ್ಪ ನಾಯ್ಕರ, ಬಸವರಾಜ ರೊಟ್ಟಿ, ಮಹೇಶ, ಮಲ್ಲಪ್ಪ ಅಂಗಡಿ ಇವರುಗಳು ಜಗಳ ಬಿಡಿಸಿದ ನಂತರ ಇನ್ನೊಮ್ಮೆ ನೀನು ಇಲ್ಲಿ ಬಂದರೆ ಜೀವ ಸಹಿತ ಉಳಿಸುವುದಿಲ್ಲ ಎಂದು ಚಾಸಾ **1** ರವನ್ನು ಹೊರಗೆ ಹಾಕಿದರು. ನಾನು ಆಗ ಹೊಲದಲ್ಲಿದ್ದು ನಡೆದ ವಿಚಾರವನ್ನು ಚಾಸಾ **1** ಹೇಳಿದ ನಂತರ ನಾನು ಅಕ್ಕನನ್ನು ಕರೆದುಕೊಂಡು ಹೋಗಿ ದೂರು ಕೊಡಿಸಿದೆ. ಈ ಎಲ್ಲಾ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿದ್ದೆ.

<u>ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ</u>

**4).** ಚಾಸಾ **1** ನನ್ನ ಅಕ್ಕ ಆಗಿದ್ದು, ಕುಮಾರ ಎಂಬುವರು ನನ್ನ ಅಣ್ಣ. ನನ್ನ ಅಣ್ಣ ಕುಮಾರ ಪೊಲೀಸಪೇದೆ ಎಂದರೆ ಸರಿ. ನನ್ನ, ನನ್ನ ತಂದೆ ಹಾಗೂ ತಾಯಿಯ ವಿರುದ್ಧ **1**ನೇ ಆರೋಪಿ ದೂರು ದಾಖಲು ಮಾಡಿದ್ದ ಎಂದರೆ ಸರಿ. ನಾವು **2**ನೇ ಆರೋಪಿ ರಾಮಚಂದ್ರಪ್ಪನ ಕಾಲು ಮುರಿದಿದ್ದೆವು ಎಂದರೆ ಸರಿಯಲ್ಲ. ಆ ಪ್ರಕರಣವನ್ನು ರಾಜಿ ಮಾಡಕೋ ಎಂದು ನಾವು ಒತ್ತಡ ಹೇರಿದ್ದು ಒಪ್ಪದೇ ಇದ್ದ ಕಾರಣ ಈ ಒಂದು ಸುಳ್ಳು ದೂರನ್ನು ಅವರ ವಿರುದ್ಧ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ.

**5).** ಚಾಸಾ **1** ರವರಿಗೆ **50** ಸಾವಿರ ರೂ. ವರದಕ್ಷಿಣೆ ತರುವಂತೆ ಆರೋಪಿಗಳು ಕಿರುಕುಳ ಕೊಡುತ್ತಿದ್ದ ವಿಚಾರದಲ್ಲಿ ನಾನು ಪೊಲೀಸರಿಗೆ **2015-16** ರಲ್ಲಿ ದೂರು ಕೊಟ್ಟಿದ್ದೇನೆ. ದಿಃ **8-8-2016** ರಂದು ಚಾಸಾ **1** ಆರೋಪಿಗಳ ಮನೆಯಲ್ಲೇ ವಾಸ ಇದ್ದಳು. ಘಟನೆಯಾದಾಗ ಅವರ ಮಕ್ಕಳು ಶಾಲೆಗೆ ಹೋಗಿದ್ದರು. **2016-17** ರಲ್ಲಿ

ಹನುಮನಾಳದಲ್ಲಿ ಮನೆ ಮಾಡಿ ನಾನು, ಚಾಸಾ 1 ಮತ್ತು ಅವರ ಮಕ್ಕಳು ವಾಸ ಇದ್ದೆವು ಎಂದರೆ ಸರಿಯಲ್ಲ. 4ನೇ ಆರೋಪಿ ಮದುವೆಯಾದ ನಂತರ ಇಳಕಲ್ಲ ತಾಲ್ಲೂಕಿನ ನಂದವಾಡಗಿ ಗ್ರಾಮದಲ್ಲಿ ಗಂಡನ ಜೊತೆ ವಾಸ ಇದ್ದರು ಎಂದರೆ ನನಗೆ ಗೊತ್ತಿಲ್ಲ.

6). ಚಾಸಾ 1 ರವರಿಗೆ ಕಿರುಕುಳ ಕೊಡಬಾರದು ಎಂದು ಚಾಸಾ 4 ಮತ್ತು 5 ಯಾವ ದಿನಾಂಕದಂದು ಹೋಗಿ ಆರೋಪಿಗಳಿಗೆ ಬುದ್ಧಿವಾದ ಹೇಳಿ ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಯಾವುದೇ ಘಟನೆ ಆಗಿರಲಿಲ್ಲ ಹಾಗೂ ಚಾಸಾ 4 ಮತ್ತು 5 ಆರೋಪಿಗಳಿಗೆ ಬುದ್ಧಿವಾದ ಹೇಳದೇ ಇದ್ದರೂ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

7). 1ನೇ ಆರೋಪಿ ಬೇರೆ ಮದುವೆ ಆಗಿರುವುದಿಲ್ಲ. 1ನೇ ಆರೋಪಿ ತೋಟದ ಮನೆಯಲ್ಲಿ ವಾಸ ಇರುತ್ತಾನೆ ಎಂದರೆ ಸರಿಯಲ್ಲ. 2 ಮತ್ತು 3ನೇ ಆರೋಪಿತರು ಜಾಸ್ತಿ ವಯಸ್ಸಾಗಿದ್ದು ಅವರಿಗೆ ಓಡಾಡಲು ಆಗುವುದಿಲ್ಲವಾದ ಕಾರಣ ಚಾಸಾ 1 ರವರಿಗೆ ಕಿರುಕುಳ ಕೊಡುವ ಪ್ರಶ್ನೆಯೇ ಉದ್ಭವಿಸಿರುವುದಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿಗೆ ಕಾಲಿಗೆ ಶಸ್ತ್ರ ಚಿಕಿತ್ಸೆ ಆಗಿರುವುರಿಂದ ಆತನಿಂದ ಒದೆಯಲು ಆಗುವುದಿಲ್ಲ ಎಂದರೆ ಆಗ ಚೆನ್ನಾಗಿದ್ದ ಎಂದು ಸಾಕ್ಷಿದಾರರು ನುಡಿದಿರುತ್ತಾರೆ.

8). ಚಾಸಾ 1 ಜೀವನಾಂಶ ಕೋರಿ 1ನೇ ಆರೋಪಿ ವಿರುದ್ಧ ಕೇಸು ಮಾಡಿದ್ದಾಳೆ ಎಂದರೆ ಸರಿ. ಅಲ್ಲದೇ ಪಾಲುವಿಭಾಗ ಕೋರಿ ಕುಷ್ಟಗಿ ನ್ಯಾಯಾಲಯದಲ್ಲಿ ದಾವೆ ಹಾಕಿದ್ದಾಳೆ ಎಂದರೆ ಸರಿ. ನಮ್ಮ ವಿರುದ್ಧ ದಾಖಲಾಗಿರುವ ಕೇಸನ್ನು 2ನೇ ಆರೋಪಿ ರಾಜಿ ಮಾಡಿಕೊಳ್ಳದೇ ಇದ್ದ ಕಾರಣ ನನ್ನ ಪೊಲೀಸ ಸಹೋದರನ ಪ್ರಭಾವದಿಂದ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು-1 ರಿಂದ 6 ಇವು ಈ ಪ್ರಕರಣಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ

**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **18/2017**

Form No.4(Civil)
(R.P.No.57)

ಪಿ.ಡಬ್ಲ್ಯೂ ನಂಃ **05**

ಸಿ.ಡಬ್ಲ್ಯೂ ನಂಃ **09**

ಸಾಕ್ಷಿಯನ್ನು ದಿನಾಂಕಃ **07-01-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಮಲ್ಲಪ್ಪ
ತಂದೆಯ ಹೆಸರು ಃ ಶಂಕ್ರಪ್ಪ
ವಯಸ್ಸು ಃ **36** ವರ್ಷ
ಉದ್ಯೋಗ ಃ ಒಕ್ಕಲುತನ
ವಾಸ ಸ್ಥಳ ಃ ಗುಡ್ಡದ ದೇವಲಾಪುರ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ಚಾಸಾ **1, 10** ರವರ ಪರಿಚಯವಿದೆ. ಈಗ ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು. **1** ನೇ ಆರೋಪಿ ಚಾಸಾ **1** ರವರ ಗಂಡ. ಅವರ ಮದುವೆ **20** ವರ್ಷಗಳ ಹಿಂದೆ ಕುಷ್ಟಗಿಯಲ್ಲಿ ಆಗಿತ್ತು. ಮದುವೆಯಾದ ನಂತರ ಆಕೆ ಗುಡ್ಡದ ದೇವಲಾಪುರಕ್ಕೆ ಹೋಗಿದ್ದಳು. ಅವರಿಗೆ ಇಬ್ಬರು ಮಕ್ಕಳು. ನಂತರ ಅವರ ಮಧ್ಯ ಸ್ವಲ್ಪ ಜಗಳ ಬಂತು. ಆದರೆ ಯಾವ ವಿಚಾರಕ್ಕೆ ಎಂದು ಗೊತ್ತಿಲ್ಲ. ಯಾವ ಕಾರಣಕ್ಕೆ ಅವರ ಮಧ್ಯ ಜಗಳ ಆಯಿತು ಮತ್ತು ಜೀವ ಬೆದರಿಕೆ ಹಾಕಿದ ಬಗ್ಗೆ ನನಗೆ ಗೊತ್ತಿಲ್ಲ. ಗಲಾಟೆ ಶಬ್ದ ಕೇಳಿ ಅವರ ಮನೆಯೊಳಗೆ ಹೋಗಿ ನೋಡಿರಲಿಲ್ಲ ಹಾಗೂ ಜಗಳ ಬಿಡಿಸಿರಲಿಲ್ಲ. ಆದರೆ ಬೇರೆಯವರಿಂದ ಅವರ ಮಧ್ಯ ಜಗಳ ಆಯಿತು ಎಂದು ತಿಳಿದುಬಂತು. ಈಗ ತೋರಿಸಿದ ಮುದ್ದೆಮಾಲು**-1** ರಿಂದ **6** ಈ ಹಿಂದೆ ನಾನು ನೋಡಿಲ್ಲ. ಪೊಲೀಸರಿಗೆ ನಾನು ಹೇಳಿಕೆ ಕೊಟ್ಟಿಲ್ಲ.

( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರ ಕೋರಿಕೆಯ ಮೇರೆಗೆ ಸದರಿ ಸಾಕ್ಷಿದಾರನನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಿದೆ.)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ

**2).** ಮದುವೆಯಾದ ನಂತರ ಸ್ವಲ್ಪ ದಿನ ಚೆನ್ನಾಗಿದ್ದು ಆ ನಂತರ ಕಿರುಕುಳ ಕೊಡಲು ಪ್ರಾರಂಭಿಸಿದರು ಎಂದರೆ ಸರಿ. ನಿನಗೆ ಚೆನ್ನಾಗಿ ಅಡುಗೆ ಮಾಡಲು ಬರುವುದಿಲ್ಲ, ನೀನು ನಮ್ಮ ಮನೆಗೆ ತಕ್ಕ ಸೊಸೆ ಅಲ್ಲ ನಿಮ್ಮ ಮನೆಯವರು ವರದಕ್ಷಿಣೆಯಾಗಿ ಏನೂ ಕೊಟ್ಟಿರುವುದಿಲ್ಲ, **50** ಸಾವಿರ ರೂ. ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಪೀಡಿಸಿ ಹೊಡೆ-ಬಡಿ ಮಾಡಿದ್ದ ಎಂದರೆ ನನಗಷ್ಟು

ಗೊತ್ತಿಲ್ಲ. ಜಗಳವನ್ನು ನಾನು ನೋಡಿಲ್ಲ. ಅಲ್ಲದೇ ಇನ್ನೊಂದು ಮದುವೆ ಆಗುವುದಾಗಿ 1 ನೇ ಆರೋಪಿ ಚಾಸಾ 1 ರವರಿಗೆ ಮಾನಸಿಕ ಹಿಂಸೆ ನೀಡುತ್ತಿದ್ದ ಎಂದರೆ ಗೊತ್ತಿಲ್ಲ.

**3).** ದಿಃ **8-8-2016** ರಂದು ಮಧ್ಯಾಹ್ನ **12** ಗಂಟೆಗೆ ಸುಮಾರಿಗೆ **1** ನೇ ಆರೋಪಿ ಮತ್ತು ಚಾಸಾ **1** ಅವರ ಮನೆಯಲ್ಲಿ ಜಗಳ ಮಾಡುತ್ತಿದ್ದ ಶಬ್ದ ಕೇಳಿಸಿತ್ತು ಎಂದರೆ ಸರಿ. ಅಲ್ಲಿಗೆ ಹೋಗಿ ನೋಡಿದಾಗ ವರದಕ್ಷಿಣೆ ತೆಗೆದುಕೊಂಡು ಬರದೇ ಇದ್ದಲ್ಲಿ ಇನ್ನೊಂದು ಮದುವೆಯಾಗುವುದಾಗಿ **1** ನೇ ಆರೋಪಿ ಹೇಳುತ್ತಿದ್ದ ಎಂದರೆ ಗೊತ್ತಿಲ್ಲ. ನಿನ್ನನ್ನು ಮುಗಿಸಿಬಿಡುತ್ತೇನೆ ಎಂದು ಆಕೆಯ ಎಡಗೈಯನ್ನು ತಿರುಚಿದ ಎಂದರೆ ಸರಿ. ಆಕೆಯ ತಲೆಕೂದಲನ್ನು ಇತರೆ ಆರೋಪಿಗಳು ಹಿಡಿದು ಎಳೆದಾಡಿದರು ಎಂದರೆ ನಾನು ನೋಡಿಲ್ಲ. ಆಗ **1** ನೇ ಆರೋಪಿ ಚಾಸಾ **1** ರವರಿಗೆ ಒದ್ದ ಎಂದರೆ ಇಲ್ಲ. **1** ನೇ ಆರೋಪಿ ಕೊಡ್ಲಿಯಿಂದ ನಿನ್ನನ್ನು ಸಾಯಿಸುತ್ತೇನೆ ಎಂದು ಚಾಸಾ **1** ರವರಿಗೆ ಹೊಡೆದಿದ್ದು ಆಕೆ ಸರಿದಾಗ ಅದು ಬಾಗಿಲಿಗೆ ಬಿದ್ದು ಅದು ತುಂಡು ತುಂಡಾದವು ಎಂದರೆ ಸರಿ. ಆಕೆ **3** ಬಾರಿ ತಪ್ಪಿಸಿಕೊಂಡಾಗ ಕೊಡ್ಲಿ ಏಟು ಬಾಗಿಲಿಗೆ ಬಿದ್ದು ಬಾಗಿಲು ಒಡೆಯಿತು ಎಂದರೆ ಸರಿ. ಅಲ್ಲಿದ್ದ ನಾನು ಮತ್ತು ಇತರರು ಜಗಳ ಬಿಡಿಸಿ ಕಳುಹಿಸಿದೆವು ಎಂದರೆ ನಾನು ನೋಡಲಿಲ್ಲ ಎಂದು ಹೇಳಿದ್ದು ನಂತರ ಸರಿ ಎಂದು ಉತ್ತರಿಸಿರುತ್ತಾರೆ. ಚಾಸಾ **1** ರವರನ್ನು ಆರೋಪಿಗಳು ಹೊರಗೆ ಹಾಕಿ ಪುನಃ ನೀನು ಮನೆಗೆ ವಾಪಸ್ ಬಂದಲ್ಲಿ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದರು ಎಂದರೆ ನನಗೆ ಕೇಳಿಸಲಿಲ್ಲ. ಈಗ ನನಗೆ ತೋರಿಸಿದ ಮುದ್ದೆಮಾಲು-**1** ರಿಂದ **6** ಚಾಸಾ **1** ರವರ ಮೇಲೆ ಕೊಲೆ ಮಾಡಲು ಬಳಸಿದ ಕೊಡ್ಲಿ ಮತ್ತು ಮುರಿದ ಬಾಗಿಲು ತುಂಡುಗಳು ಎಂದರೆ ಸರಿ. ಘಟನೆಯ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ

**4).** ಚಾಸಾ **1** ತಮ್ಮ ಈ ದಿನ ನನ್ನನ್ನು ಕೋರ್ಟಿಗೆ ಕರೆದುಕೊಂಡು ಬಂದಿದ್ದಾನೆ ಎಂದರೆ ಸರಿ. ನಮ್ಮ ಮನೆ ಆರೋಪಿತರ ಮನೆಯ ಬಳಿ ಇರುವುದಿಲ್ಲ ಆದರೆ ಅದೇ ಓಣಿಯಲ್ಲಿ ಓಡಾಡುತ್ತಿರುತ್ತೇನೆ. ದಿಃ **8-8-2016** ರಂದು ಗಂಡ-

ಹೆಂಡತಿಯ ಮಧ್ಯ ಗಲಾಟೆಯಾಯಿತು. ನಾನು ಒಕ್ಕಲುತನ ಮಾಡುತ್ತೇನೆ. ಚಾಸಾ 1 ಸಂಬಂಧದಲ್ಲಿ ನನ್ನ ಅಕ್ಕ ಆಗಬೇಕು. ನನ್ನ ಅಣ್ಣನ ಹೆಸರು ಮುತ್ತಪ್ಪ. 1 ನೇ ಆರೋಪಿ ಹನುಮಸಾಗರ ಪೊಲೀಸ ಠಾಣೆಯಲ್ಲಿ ಶರಣಪ್ಪ ಮತ್ತು ಬಸಟೆಪ್ಪ ಮತ್ತು ಚಾಸಾ 1 ರವರ ತಾಯಿ ಉಮ್ಮವ್ವ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಆ ಕೇಸಿನಲ್ಲಿ ನನ್ನ ಅಣ್ಣ ಮುತ್ತಪ್ಪ ಪ್ರತ್ಯಕ್ಷ ಸಾಕ್ಷಿದಾರ ಎಂದು ತೋರಿಸಿದ್ದಾರೆ ಎಂದರೆ ಸರಿ.

5). ಗಂಡ-ಹೆಂಡತಿ ಜಗಳವನ್ನು ನಾನು ಕಣ್ಣಾರೆ ನೋಡಿಲ್ಲ ಆದರೆ ಕೇಳಿದ್ದೆ. ನಾನು ಮನೆಯ ಮುಂದೆ ನಡೆದುಕೊಂಡು ಹೋದಾಗ ಮುದ್ದೆಮಾಲು-1 ರಿಂದ 6 ಬಾಗಿಲ ಬಳಿ ಬಿದ್ದಿದ್ದವು. ನಾನು ಯಾವುದೇ ಜಗಳವನ್ನು ನೋಡದೇ ಇದ್ದರೂ ಚಾಸಾ 1 ಸಂಬಂಧಿಕರಾಗಿದ್ದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ನಾನು ಹೋಗುವಷ್ಟರಲ್ಲಿ ಜಗಳ ಆಗಿತ್ತು ಎಂದು ಸಾಕ್ಷಿದಾರರು ನುಡಿದಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ